ಶ್ರೀ ಎಚ್. ಡಿ. ದೇವೇಗೌಡ.—ಹಾರಂಗಿ ಫೌಂಡೇಷನ್ ಸ್ಟೋನ್ ಹಾಕಿದಕಾಲದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ಐದು ವರ್ಷಗಳೊಳಗೆ ಪೂರೈಸುತ್ತೇವೆಂದು ಹೇಳಿಕೆ ಕೊಟ್ಟಿದ್ದು ನಿಜವಲ್ಲವೇ ? ಅದು ಕಾರ್ಯಗತವಾಗುವ ಹಾಗೆ ಕೂಡಲೇ ಸರ್ಕಾರದವರು ಹಣವನ್ನು ಒದಗಿಸಿ ಆ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಫೌಂಡೇಷನ್ ಸ್ಟೋನ್ ಹಾಕುವ ಮುನ್ನ ನಾನು ಇರಲಿಲ್ಲ. ಯಾವುದೇ ಕೆಲಸಮಾಡಲಿ, ನಾವು ಅದರ ಬಗ್ಗೆ ಕಾತುರತೆಯಿಂದ ಇರುತ್ತೇವೆ. ಆದಷ್ಟು ಜಾಗ್ರತೆ ಇದನ್ನು ಮುಗಿಸಬೇಕೆಂಬುದೇ ನಮ್ಮ ಆಶೆ. ನಮಗೆ ಹಣದ ಅಭಾವ ಬಾರದೇ ಹೋದರೆ ಅದನ್ನು ಮುಗಿಸುವುದಕ್ಕೆ ಕಷ್ಟವಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ಕಾವೇರಿ ಬೇಸಿನ್‌ನಲ್ಲಿರತಕ್ಕ ನೀರಿನ ಹಕ್ಕಿನ ಪರಿಮಿತಿ 1974ನೇ ಇಸವಿಯೊಳಗೆ ಉಪಯೋಗವಾಗಬೇಕು. ಅದಾದನಂತರ ಇಡೀ ನೀರಿನ ಹಂಚಿಕೆ ಬಗ್ಗೆ ಮದ್ರಾಸಿಗೂ ನಮಗೂ ಪ್ರಶ್ನೆ ಬರುವ ಸಂದರ್ಭದಲ್ಲಿ ನಮ್ಮ ಹಕ್ಕು ಸೇಕಡ 6)ರಷ್ಟು ಅವರಿಗೆ ಹೋಗಬೇಕಾಗಿದೆ. ಅಂತಹ ಪರಿಸ್ಥಿತಿ ಈಗ ಇರುವುದರಿಂದ 1974ನೇ ಇಸವಿಯೊಳಗೆ ಈ ಯೋಜನೆಯನ್ನು ಮುಗಿಸುವುದಕ್ಕೆ ಏನು ಕ್ರಮಗಳನ್ನು ತೆಗೆದುಕೊಳ್ಳುತ್ತೀರಿ. ಈಗ ಟೆಂಡರ್ ಓಪನ್ ಮಾಡಿರುವ ರೀತಿ ನೀತಿ ಮಲತಾಯಿ ಧೋರಣೆಯಿಂದ ಕೂಡಿದ ಹಾಗೆ ಇದೆಯೆಂದು ಹೇಳಬಹುದಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಇದು ನಾನ್ ಪೆಡ್ಯೂರ್ ರಿವರ್. ಆದ್ದರಿಂದ ಈ ಕರಾರಿನಲ್ಲಿ ಆದು ಬಂದಿಲ್ಲ. 1974ರೊಳಗೇ ಈ ಯೋಜನೆ ಮುಗಿಸಬೇಕೆಂದು ಈ ಕರಾರಿನಲ್ಲಿಲ್ಲ. ನೀರಿನ ಲೆಕ್ಕವನ್ನು ಬರೆದುಕೊಳ್ಳುವುದಕ್ಕೆ ಏನು ಮಾಡಬೇಕೋ ಅದರ ಬಗ್ಗೆ ವ್ಯವಸ್ಥೆಮಾಡಿದೆ, ಹಣ ಒದಗಿಸಿದರೆ ಆದಷ್ಟು ಜಾಗ್ರತೆ ಅದನ್ನು ಮುಗಿಸಬೇಕೆಂದು ನನ್ನ ಆಶೆ.

Allotment of free timbers to S. C. Families

265. Sri R. N. LAKSHMIPATHI (Gauribidanur).—

Will the Minister for Social Welfare be pleased to state :—

(*a*) the number of Scheduled Caste families that received free timber for construction of houses in Gauribidanur Taluk ;

(*b*) whether they have received any complaints that the timber received is misused ;

(*c*) if so, the date of receipt of the complaint and the findings of the enquiry ?

A.—Sri G. NARAYANA GOWDA (Minister for Social Welfare).—

(*a*) 502 from September, 1966 to date.

(*b*) Yes.

(*c*) April 1967. The matter has been referrred to the Vigilance Commission for investigation.

ಶ್ರೀ ಆರ್. ಎನ್. ಲಕ್ಷ್ಮೀಪತಿ.—502 ಮನೆಗಳಿಗೆ ಮರ ಸರಬರಾಜು ಮಾಡಿದೆಯೆಂದು ಉತ್ತರದಲ್ಲಿ ಹೇಳಿದೆ. ಅದರಲ್ಲಿ ಸೇಕಡ ೨೨ಷ್ಟೂ ಕೂಡ ಇನ್ನೂ ಮನೆಗಳನ್ನು ಕಟ್ಟಿಲ್ಲ. ನಿಮ್ಮ ಬಿ. ಡಿ. ಓ.ಗಳು, ಸೋಷಿಯಲ್ ವೆಲ್‌ಫೇರ್ ಆಫೀಸರುಗಳಿದ್ದರೂ ಆ ಕುಟುಂಬಗಳಿಗೆ ಟಿಂಬರ್ ಬಂದುದು ಸದ್ವಿನಿಯೋಗವಾಗದೆ ದರುಪಯೋಗವಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಜಿ. ನಾರಾಯಣಗೌಡ.—ಆದಕ್ಕೋಸ್ಕರವೇ ಈ ವಿಚಾರವನ್ನು ವಿಜಿಲೆನ್ಸ್ ಕಮಿಷನಿಗೆ ರೆಫರ್ ಮಾಡಿದೆ. ಅವರು ಅದನ್ನು ತನಿಖೆ ಮಾಡುತ್ತಿದ್ದಾರೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈಗ ಅದನ್ನು ಹಂತಹಂತವಾಗಿ ಕೊಡುತ್ತೀರಿ. ಮೊದಲು ಐವತ್ತು ಅಥವಾ ನೂರು ಕುಂಟುಂಬಗಳಿಗೆ ಮಾರ ಕೊಟ್ಟಾಗ್ಗೆ ಅದು ಯಾವ ರೀತಿ ಉಪಯೋಗವಾಗಿದೆ ಯೆಂಬದುನ್ನು ತನಿಖೆ ಮಾಡಿದ್ದೀರಾ ?

ಶ್ರೀ ಜಿ. ನಾರಾಯಣಗೌಡ.—ಈ ದೂರುಗಳು ಬಂದಮೇಲೆ ಇದನ್ನು ವಿವರಗಳೊಂದಿಗೆ ವಿಜಿಲೆನ್ಸ್ ಕಮಿಷನ್ನಿನ ಮುಂದೆ ಇಟ್ಟಿದ್ದೇವೆ. ಅವರು ತನಿಖೆ ಮಾಡುತ್ತಿದ್ದಾರೆ.

ಶ್ರೀ ಎ. ಮುನಿಯಪ್ಪ.—ನೀವು ವಿಜಿಲೆನ್ಸ್ ಕಮಿಷನ್ನಿಗೆ ಇದನ್ನು ರೆಫರ್ ಮಾಡಿದ್ದೀರಿ. 67ನೇ ಇನವಿಯಲ್ಲಯೇ ನಿಮ್ಮ ಕಾಗದವನ್ನು ಪೋಸ್ಟ್ ಆಫೀಸಿನಲ್ಲಿ ಹೊತ್ತುಹಾಕಿದ್ದೀರಿ. ಆ ವಿಚಾರದ ಬಗ್ಗೆ ನೀವು ಇದುವರೆಗೆ ಎಷ್ಟು ಸಾರಿ ಅವರನ್ನು ಕೇಳಿದ್ದೀರಿ. ಅವರಿಂದ ಅದಕ್ಕೇನು ಜವಾಬು ಬಂದಿದೆ ?

ಶ್ರೀ ಜಿ. ನಾರಾಯಣಗೌಡ.—ವಿಜಿಲೆನ್ಸ್ ಕಮಿಷನನ್ನು ಕೇಳಿದ್ದೇವೆ. ಅವರು ಒಂದು ಇಂಟರಿಮ್ ಕಾಗದವನ್ನು ಕಳುಹಿಸಿದ್ದಾರೆ, ಅಲ್ಲದೆ ನಾವು ಆ ದೂರುಗಳನ್ನು ಪರಿಶೀಲಿಸಿದ ಮೇಲೆ ಅಖೈರು ವರದಿಯನ್ನು ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎ. ಮುನಿಯಪ್ಪ.—ಈ ತನಿಖೆಗೆ ಅವರು 10 ವರ್ಷಗಳನ್ನು ತೆಗೆದುಕೊಂಡರೂ ನೀವು ನುಮ್ಮನೆ ಇರುತ್ತೀರಾ ?

ಶ್ರೀ ಜಿ. ನಾರಾಯಣಗೌಡ.—502 ಕೇಸುಗಳು ಅವರಿಗೆ ಸಂಬಂಧಪಟ್ಟುದು ಆಗಿವೆ. ಅವೆಲ್ಲವನ್ನೂ ತನಿಖೆಮಾಡಲು ಸ್ವಲ್ಪಕಾಲ ಬೇಕಾಗುತ್ತದೆ.

ಶ್ರೀ ಕೆ. ಎಂ. ತಮ್ಮಯ್ಯ.—ಕಡೂರು ತಾಲ್ಲೂಕಿನಲ್ಲಿ ಈ ತರಹ ಟಿಂಬರ್‌ಗಳನ್ನು 10,800 ರೂಪಾಯಿಗಳಿಗೆ ಮಾರಿ, ಅವರಿಗೆ ಸಂಬಂಧಪಟ್ಟವರನ್ನು ಅರೆಸ್ಟ್ ಮಾಡಿದ್ದರೂ ಮತ್ತೆ ಅವರನ್ನೇ ಕೆಲಸಕ್ಕೆ ಸೇರಿಸಿದ್ದಾರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಜಿ. ನಾರಾಯಣಗೌಡ.—ಈಗಿನ ಪ್ರಶ್ನೆ ಗೌರಿಬದನೂರಿಗೆ ಸಂಬಂಧಪಟ್ಟುದು.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈ ತಾಲ್ಲೂಕಿನಲ್ಲಿ ಸಂಸ್ಥಾನಾಮಳೆ ಮರಮುಟ್ಟುಗಳು ದುರುಪಯೋಗವಾಗಿವೆಯೆಂದು ಹೇಳಿದರೂ ಅಲ್ಲಿನ ಪಂಚಾಯತಿಯ ಜೇರ್‌ಮನ್ನರು, ಬಿ.ಡಿ.ಓಗಳು, ಸೋಷಿಯರ್ ವೆರ್‌ಫೇರ್ ಆಫೀಸರ್ಸ್ ಅದನ್ನು ನೋಡಿಕೊಂಡು ನುಮ್ಮನೆ ಇರುತ್ತಾರೆ. ಆದ್ದರಿಂದ ನೇರವಾಗಿ ತಮ್ಮ ಕೈಕೆಳಗೆ ಇರುವ ಅಧಿಕಾರಿಗಳು ಏಕೆ ತನಿಖೆಮಾಡಬಾರದು ?

ಶ್ರೀ ಜಿ. ನಾರಾಯಣಗೌಡ.—ಮಾನ್ಯ ಸದಸ್ಯರು ಹೇಳಿದ ಹಾಗೆ ಈ ಪ್ರಶ್ನೆಗೆ ಅಲ್ಲಿನ ಅಧಿಕಾರಿಗಳೂ ಸಂಬಂಧಪಟ್ಟಿದ್ದಾರೆಂದು ಹೇಳಿರುವುದರಿಂದ, ಅದನ್ನು ವಿಜಿಲೆನ್ಸ್ ಕಮಿಷನ್ನಿಗೆ ರೆಫರ್ ಮಾಡಿದ್ದೇವೆ.

ಶ್ರೀ ಬಿ. ಚಿಕ್ಕೇಗೌಡ.—ಸರ್ಕಾರಿ ಡಿಪೋಗಳಿಂದ ಇದನ್ನು ತರುವಾಗ ದುರುಪಯೋಗ ವಾಗುತ್ತಿರುವುದರಿಂದ ಇದನ್ನು ಸರ್ಕಾರದವರೆ ನೇರವಾಗಿ ತರಿಸಿ ಅರ್ಜಿದಾರರಿಗೆ ಹಂಚುವುದಕ್ಕೆ ಆಗುವುದಿಲ್ಲವೇ ?

ಶ್ರೀ ಜಿ. ನಾರಾಯಣಗೌಡ.—ಈಗ ಆ ಕೆಲಸವನ್ನು ಬಿ. ಡಿ. ಓ. ಗೆ ವಹಿಸಲಾಗಿದೆ. ಅರ್ಜಿ ದಾರರಿಗೆ ಲೈಸೆನ್ಸ್‌ಗಳನ್ನು ಕೊಡತಕ್ಕ ಕಾಲದಲ್ಲಿ ಮತ್ತು ಆ ನಾಟಾಗಳನ್ನು ಡಿಪೋದಿಂದ ತಂದ ನಂತರ ಎರಡಾವರ್ತಿಯೂ ಚೆಕ್‌ಮಾಡಬೇಕೆಂದು ತಿಳಿಸಿದ್ದೇವೆ. ಅವರು ಹಾಗೆ ಚೆಕ್ ಮಾಡಿ ನೋಡುತ್ತಿದ್ದಾರೆ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—ಇವರಿಗೆ ಬೇಕಾಗತಕ್ಕ ನಾಟಾವನ್ನು ಅಯಾಯ ತಾಲ್ಲೂಕ್ ತಾಶೀಲ್ದಾರರ ಮೂಲಕ ತರಿಸಿ ಕೊಡುವಂತೆ ಒಂದು ವ್ಯವಸ್ಥೆಯನ್ನು ಸರ್ಕಾರ ದವರು ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಜಿ. ನಾರಾಯಣಗೌಡ.—ಈಗ ಬಿ. ಡಿ. ಓ. ಅವರು ಈ ಕೆಲಸವನ್ನು ನಿರ್ವಹಿಸು ತ್ತಿದ್ದಾರೆ. ಅವರು ಸರಿಯಾಗಿ ಕೆಲಸ ಮಾಡುತ್ತಿದ್ದಾರೆಂದು ನನಗೆ ತಿಳಿದುಬಂದಿದೆ.